ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 115- 122
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಿಜಯಪುರ ಪ್ರದೇಶದ ರಾಷ್ಟ್ರೀಯ ಚಳುವಳಿ ಹಾಗೂ ದಲಿತೋದ್ಧಾರ ಕಾರ್ಯದಲ್ಲಿ ಮಹಾತ್ಮ ಗಾಂಧೀಜಿಯವರ ಪ್ರಭಾವ

**ಹಣಮಂತ್ರಾಯ ಆರ್. ಹೊನ್ನಳ್ಳಿ*    ಮತ್ತು ಡಾ. ಎಸ್.ಕೆ. ಕಲ್ಲೋಳಿಕರ****

*ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಮತ್ತು ಪುರಾತತ್ವ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

***Abstract:***

*ಕರ್ನಾಟಕದಲ್ಲಿ ನಡೆದ ಅಸ್ಪೃಶ್ಯತೆ ನಿವಾರಣಾ ಚಳುವಳಿಯಲ್ಲಿ ವಿಜಯಪುರ (ಅವಿಭಜಿತ) ಜಿಲ್ಲೆಯು ತನ್ನದೇ ಆದ ವಿಶಿಷ್ಟ ಸ್ಥಾನಮಾನ ಪಡೆದುಕೊಂಡಿದೆ. 20ನೇ ಶತಮಾನದಲ್ಲಿ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧೀಜಿಯವರ ಪ್ರಭಾವದಿಂದ ಭಾರತದಲ್ಲಿ ಸಾಮಾಜಿಕ ಚಳುವಳಿಗಳು ಜರುಗಿದವು. ಇದಕ್ಕೆ ವಿಜಯಪುರ ಜಿಲ್ಲೆಯು ಹೊರತಾಗಿರಲಿಲ್ಲ. ಜನಸಾಮಾನ್ಯರಲ್ಲಿ ಸಾಮಾಜಿಕ ಸಮಾನತೆಯ ಪ್ರಜ್ಞೆ ಮೂಡಿಸುವ ಹಾಗೂ ರಾಜಕೀಯ ಸಹಭಾಗಿತ್ವದ ಉದ್ದೇಶಕ್ಕಾಗಿ 1911ರಲ್ಲಿ ವಿಜಯಪುರ ಮತ್ತು ಬಾಗಲಕೋಟೆಗಳಲ್ಲಿ 'ಬಸವ ಜಯಂತಿ'ಯ ಆಚರಣೆಯನ್ನು ಆರಂಭಿಸಿದರು. 1918ರಲ್ಲಿ ವಿಜಯಪುರದಲ್ಲಿ ಏರ್ಪಡಿಸಲಾಗಿದ್ದ "ಮುಂಬೈ ಪ್ರಾಂತೀಯ ಕಾಂಗ್ರೆಸ್ ಸಮ್ಮೇಳನಕ್ಕೆ" ಆಗಮಿಸಿದ್ದ ಗಾಂಧೀಜಿಯವರನ್ನು ಅದೇ ಸಮಯದಲ್ಲಿ ಆಯೋಜಿಸಿದ್ದ ಅಸ್ಪೃಶ್ಯತೆಯ ನಿವಾರಣಾ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಮಾಡಿದರು. ಗಾಂಧೀಜಿಯವರು ಅಸ್ಪೃಶ್ಯರಿಗಾಗಿ ಆಯೋಜಿಸಲ್ಪಟ್ಟ ಸಮ್ಮೇಳನದಲ್ಲಿ ದಲಿತರೇ ಇಲ್ಲವೆಂದರೆ ಈ ಸಮ್ಮೇಳನದಿಂದ ಯಾವುದೇ ಪ್ರಯೋಜನವಿಲ್ಲ ಎಂದು ಸಭೆಯನ್ನು ತ್ಯಾಗ ಮಾಡುವ ಮೂಲಕ ಸಭೆಯ ಮಹತ್ವವನ್ನು ತೋರ್ಪಡಿಸಿದ್ದರು.*

***Keywords:*** *ಮಹಾತ್ಮ ಗಾಂಧೀಜಿ, ವಿಜಯಪುರ, ದಲಿತೋದ್ಧಾರ.*

## ಪೀಠಿಕೆ

ವಿಜಯಪುರ ಜಿಲ್ಲೆಯು ಹನ್ನೆರಡನೇ ಶತಮಾನದಲ್ಲೇ ಬಸವ ನಾಡು, ಕಲ್ಯಾಣ ಕ್ರಾಂತಿ ಹಾಗೂ ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದ ಭೂಮಿ ಎಂಬ ಉಪನಾಮಗಳನ್ನು ಹೊಂದಿತ್ತು. ಇನ್ನೊಂದೆಡೆ ಅಸಮಾನತೆ, ಕೆಳ ವರ್ಗದವರ ಮೇಲೆ ದೌರ್ಜನ್ಯ, ಅಸ್ಪೃಶ್ಯತೆ ಆಚರಣೆಯಲ್ಲಿ ಉಳಿದ ಪ್ರದೇಶಗಳಿಗಿಂತ ಒಂದು ಹೆಜ್ಜೆ ಮುಂದಿದ್ದ ಪ್ರದೇಶವಾಗಿತ್ತು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 1932ರ ಪೂನಾ ಒಪ್ಪಂದವು ಒಂದು ಚಾರಿತ್ರಿಕ ಘಟನೆಯಾಗಿದೆ. ಕಾರಣ ಅಲ್ಲಿಯವರೆಗೂ ಗಾಂಧೀಜಿಯವರ ನೇತೃತ್ವದ ಸ್ವಾತಂತ್ರ್ಯ ಹೋರಾಟವು ರಾಜಕೀಯ ಸ್ವಾತಂತ್ರ್ಯಕ್ಕೆ ಸೀಮಿತವಾಗಿತ್ತು. ಈ ಒಪ್ಪಂದದ ನಂತರದಲ್ಲಿ

***Please cite this article as:*** ಹಣಮಂತ್ರಾಯ ಆರ್. ಹೊನ್ನಳ್ಳಿ ಮತ್ತು ಎಸ್.ಕೆ. ಕಲ್ಲೋಳಿಕರ. (2022). ವಿಜಯಪುರ ಪ್ರದೇಶದ ರಾಷ್ಟ್ರೀಯ ಚಳುವಳಿ ಹಾಗೂ ದಲಿತೋದ್ಧಾರ ಕಾರ್ಯದಲ್ಲಿ ಮಹಾತ್ಮ ಗಾಂಧೀಜಿಯವರ ಪ್ರಭಾವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(5), 115–122.

'ಹರಿಜನ ಸೇವಾ ಸಂಘ' ಮತ್ತು 'ಹರಿಜನ' ಪತ್ರಿಕೆಗಳ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಳ ಸಾಧನೆಯತ್ತ ಗಮನ ಹರಿಸಿದರು. ಮಹಾತ್ಮ ಗಾಂಧೀಜಿಯವರು 1934ರಲ್ಲಿ ಅಸ್ಪೃಶ್ಯತೆ ನಿವಾರಣೆ ಹಾಗೂ ದಲಿತೋದ್ಧಾರ ಸತ್ಯಾಗ್ರಹಕ್ಕಾಗಿ ಕೈಗೊಂಡ ಅಖಿಲ ಭಾರತ ಪ್ರವಾಸದ ಸಂದರ್ಭದಲ್ಲಿ ಕರ್ನಾಟಕದ ಹಲವಾರು ಜಿಲ್ಲಾ ಕೇಂದ್ರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಬೇಟಿ ನೀಡಿ ಅಸ್ಪೃಶ್ಯತೆ ಆಚರಣೆ ಮಾಡದಿರುವಂತೆ ತಮ್ಮ ಭಾಷಣಗಳ ಮೂಲಕ ಜನರನ್ನು ಮನವೊಲಿಸಿ ಸಮಾನತೆಯ ತತ್ವದತ್ತ ಸೆಳೆಯುವಲ್ಲಿ ಪ್ರಯತ್ನಿಸಿದರು.

**ಅಧ್ಯಯನ ಉದ್ಧೇಶಗಳು**

ಸದರಿ ಲೇಖನದ ಉದ್ಧೇಶವು 1932ರಿಂದ ಮಹಾತ್ಮ ಗಾಂಧೀಜಿಯವರು ಕೈಗೊಂಡ ಅಸ್ಪೃಶ್ಯತೆಯ ನಿವಾರಣಾ ಚಳುವಳಿಗೆ ವಿಜಯಪುರ ಜಿಲ್ಲೆಯ ಸ್ಥಳೀಯ ಕಾಂಗ್ರೆಸ್‌ನ ಕಾರ್ಯಕರ್ತರ ಪ್ರತಿಕ್ರಿಯೆ ಹಾಗೂ ಜನಸಾಮಾನ್ಯರು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯ ವಿರುದ್ಧ ಕೈಗೊಂಡ ಕಾರ್ಯಯೋಜನೆಗಳ ಮೇಲೆ ಗಾಂಧೀಜಿಯವರ ಪ್ರಭಾವವನ್ನು ಗಮನದಲ್ಲಿರಿಸಿಕೊಂಡು ಸಿದ್ಧಪಡಿಸಲಾಗಿದೆ.

**ಆಕರ ಮತ್ತು ಅಧ್ಯಯನ ವಿಧಾನಗಳು**

ಈ ಲೇಖನದ ಉದ್ಧೇಶ ಸಾಧನೆಗಾಗಿ ಪ್ರಾಥಮಿಕ ಮತ್ತು ಅನುಷಂಗಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಇಲ್ಲಿ ಐತಿಹಾಸಿಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳಡಿಯಲ್ಲಿ ಲೇಖನವನ್ನು ರಚಿಸಲಾಗಿದೆ. ವಿಜಯಪುರ ಪ್ರದೇಶದ ಗ್ರಾಮೀಣ ಪ್ರದೇಶದ ಜನತೆಯ ಮೇಲೆ ಗಾಂಧೀಜಿಯವರ ಪ್ರಭಾವವನ್ನು ವಿವರಿಸಲು ಆಯ್ದ ಸ್ಥಳಗಳನ್ನು ಹಾಗೂ ವ್ಯಕ್ತಿಗಳನ್ನು ಕೇಂದ್ರೀಕರಿಸಿ ಸದರಿ ಲೇಖನವನ್ನು ಸಿದ್ಧಪಡಿಸಲಾಗಿದೆ.

**ವಿಜಯಪುರ ಜಿಲ್ಲೆಗೆ ಮಹಾತ್ಮ ಗಾಂಧೀಜಿಯವರ ಭೇಟಿಗಳು**

ಮಹಾತ್ಮ ಗಾಂಧೀಜಿಯವರು ವಿಜಯಪುರ ಜಿಲ್ಲೆಯ ಜೊತೆಗೆ ನೇರ ಸಂಬಂಧ ಹೊಂದಿದ್ದರು ಹಾಗೂ ಜಿಲ್ಲೆಯಲ್ಲಿ ಜರುಗಿದ ಚಳುವಳಿಗಳ ಮೇಲೆ ಇವರ ನೇರ ಪ್ರಭಾವವಿತ್ತು. ವಿಜಯಪುರಕ್ಕೆ 1918, 1921, 1927 ಮತ್ತು 1934ರಲ್ಲಿ ಒಟ್ಟು ನಾಲ್ಕು ಭಾರಿ ಬೇಟಿ ನೀಡಿ ಜಿಲ್ಲೆಯಲ್ಲಿ ಸಂಚರಿಸಿದ್ದಲ್ಲದೇ ಸ್ವಾತಂತ್ರ್ಯ ಚಳುವಳಿಗಾರರನ್ನು ಸಂಘಟನೆ ಮಾಡುವುದರ ಜೊತೆಗೆ ಇಲ್ಲಿ ಜರುಗಿದ ಸಭೆ ಸಮಾರಂಭಗಳಲ್ಲಿ ಸ್ವತಃ ಭಾಗವಹಿಸಿದ್ದಾರೆ.

ಮೊದಲ ಬಾರಿಗೆ ಆಗಸ್ಟ್ 5 ಮತ್ತು 6, 1918 ರಂದು ಮುಂಬೈ ಪ್ರಾಂತ್ಯ ರಾಜಕೀಯ ಪರಿಷತ್ತಿನಲ್ಲಿ ಭಾಗವಹಿಸಲು ಆಗಮಿಸಿದ್ದರು. ಎರಡನೇ ಬಾರಿಗೆ ಮೇ 26 ಮತ್ತು 27, 1921ರಲ್ಲಿ ಖಿಲಾಪತ್ ಮತ್ತು ಅಸಹಕಾರ ಚಳುವಳಿಗಳ ಪ್ರಚಾರಕ್ಕಾಗಿ ಸಿ.ಆರ್. ದಾಸ್, ಲಾಲಾ ಲಜಪತರಾಯ್, ಜೆ.ಬಿ. ಕೃಪಲಾನಿ, ರಾಜೇಂದ್ರ ಪ್ರಸಾದ, ನಾರಿಮನ್, ಕೆ.ಎಂ. ಮುನ್ಷಿ, ಜವಾಹರಲಾಲ್ ನೆಹರೂ, ಶೌಕತ್ ಅಲಿ ಮತ್ತು ಮಹಮ್ಮದ್ ಅಲಿಯವರು ಗಾಂಧೀಜಿಯವರ ಜೊತೆಗಿದ್ದರು.[1] ಇದೇ ಸಮಯದಲ್ಲಿ ಮಹಿಳಾ ಸಮಾವೇಶದಲ್ಲಿ ಪಾಲ್ಗೊಂಡು ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರು ಭಾಗವಹಿಸುವಂತೆ ಮಹಾತ್ಮಾ ಗಾಂಧೀಜಿಯವರು ಮನವಿ ಮಾಡಿಕೊಂಡಿದ್ದರು.

[1] ಕಾಮತ್ ಸೂರ್ಯನಾಥ (ಸಂ.) (1974). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು–ಸಂಪುಟ ಒಂದು.* ಪು.ಸಂ. 1185.

ಮೂರನೇ ಬಾರಿ 1927 ಫೆಬ್ರುವರಿ 21 ರಂದು ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣಾ ಆಂದೋಲನ ಹಾಗೂ ಸ್ವದೇಶ ಚಿಂತನೆಗಳ ಸಂದೇಶ ಸಾರಲು ವಿಜಯಪುರಕ್ಕೆ ಬಂದಿದ್ದರು. ನಾಲ್ಕನೇ ಬಾರಿ ಮಾರ್ಚ 8, 1934 ರಂದು ಪೂನಾ ಒಪ್ಪಂದದ ನಂತರ ಗಾಂಧೀಜಿಯವರು ಮಹತ್ವಪೂರ್ಣ ಅಸ್ಪೃಶ್ಯತೆ ನಿವಾರಣಾ ಚಳುವಳಿಯ ನಿರ್ಣಯ ಕೈಗೊಂಡು ಚಳುವಳಿಯ ಪ್ರಚಾರಕ್ಕಾಗಿ ಅಖಿಲ ಭಾರತ ಅಸ್ಪೃಶ್ಯತಾ ನಿವಾರಣಾ ಯಾತ್ರೆಯನ್ನು ಕೈಗೊಂಡಾಗ ಕರ್ನಾಟಕದ ವಿಜಯಪುರ ಜಿಲ್ಲೆಗೂ ಕೂಡ ಆಗಮಿಸಿದ್ದರು.

**1918ರ ಮುಂಬೈ ಪ್ರಾಂತೀಯ ಕಾಂಗ್ರೇಸ್ ಸಮ್ಮೇಳನ**

1918 ರ ಮುಂಬೈ ಪ್ರಾಂತೀಯ ಕಾಂಗ್ರೆಸ್ ಸಮ್ಮೇಳನವು ವಿಜಯಪುರದಲ್ಲಿ ಏರ್ಪಡಿಸಲಾಗಿದ್ದು, ಗಾಂಧೀಜಿಯವರು ಸಮ್ಮೇಳನದ ಅಧ್ಯಕ್ಷರಾಗಿ ವಿಜಯಪುರಕ್ಕೆ ಆಗಮಿಸಿದ್ದರು. ಗಾಂಧೀಜಿಯವರು ಭಾಷಣದ ಪ್ರಾರಂಭದಲ್ಲಿಯೇ ಈ ಸಮಾರಂಭದಲ್ಲಿ ಯಾರಾದರೂ ಅಸ್ಪೃಶ್ಯರಿದ್ದಾರೆಯೇ? ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರವಾಗಿ ಕೂಡಿದ ಸಭಿಕರು "ಯಾರು ಇಲ್ಲ" ಎಂದ ಕೂಡಲೇ ಮಹಾತ್ಮ ಗಾಂಧೀಜಿಯವರು ಈ ಸಮ್ಮೇಳನದಿಂದ ಯಾವುದೇ ಪ್ರಯೋಜನವಿಲ್ಲ ಎಂದು ಸಭೆಯನ್ನು ತ್ಯಾಗ ಮಾಡಿದರು.[2] ಸಮ್ಮೇಳನದ ಕಾರ್ಯಕರ್ತರು ಮದ್ಯಾಹ್ನದ ವೇಳೆಗೆ ಸಭೆ ಸೇರಿ ಊರಿನ ಅಂತ್ಯಜರನ್ನು ಅಥವಾ ದಲಿತರನ್ನು ಮನವೊಲಿಸಿ ಕರೆದು ತಂದು ಕೂರಿಸಿದರು. ಪೂರ್ವ ನಿಯೋಜನೆಯಂತೆ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಸಮ್ಮೇಳನವನ್ನು ಯಶಸ್ವಿಗೊಳಿಸಿದರು.

**ನಾಗಠಾಣ ಗ್ರಾಮಸ್ಥರ ಮೇಲೆ ಮಹಾತ್ಮರ ಪ್ರಭಾವ**

1932ರಲ್ಲಿ ಗಾಂಧೀಜಿಯವರು ಯರವಾಡ ಜೈಲಿನಲ್ಲಿ ಉಪವಾಸ ಕೈಗೊಂಡಿದ್ದರು. ಇದನ್ನು ಅನುಸರಿಸಿ ನಾಗಠಾಣ ಗ್ರಾಮದ ಗುರುಬಸಪ್ಪ ಅರಕೇರಿಯವರು ಉಪವಾಸ ಮಾಡಿದ್ದರು. ಇದನ್ನು ಸೂರ್ಯನಾಥ ಕಾಮತರು ತಮ್ಮ ಭಾರತ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ 1ರಲ್ಲಿ 1932ರಲ್ಲಿ ಗಾಂಧೀಜಿಯವರು ಅಸ್ಪೃಶ್ಯತೆಯ ನಿವಾರಣೆಗಾಗಿ ಉಪವಾಸ ಕೈಗೊಂಡಿದ್ದರು ಎಂದು ತಪ್ಪಾಗಿ ದಾಖಲಿಸಿದ್ದಾರೆ.[3] 1933ರ ಮೇ ತಿಂಗಳಲ್ಲಿ ಮಹಾತ್ಮರು ಅಸ್ಪೃಶ್ಯತೆಯ ನಿವಾರಣೆಗಾಗಿ ಉಪವಾಸ ಮಾಡಿದಾಗ ನಾಗಠಾಣ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತರು ಸಾರ್ವಜನಿಕ ಬಾವಿಗಳಲ್ಲಿ ಹರಿಜನರಿಂದ ನೀರನ್ನು ಸೇದಿಸಿ ಆ ನೀರನ್ನು ಗ್ರಾಮಸ್ಥರೆಲ್ಲರೂ ಕುಡಿದರು. ಅಲ್ಲದೇ ಗ್ರಾಮದ ದೇವಾಲಯಗಳನ್ನು ಯಾವುದೇ ಬೇಧ ಭಾವವಿಲ್ಲದೇ ಎಲ್ಲರ ಪ್ರವೇಶಕ್ಕೆ ಮುಕ್ತಗೊಳಿಸಿದರು.[4] 1934ರ ಹರಿಜನೋದ್ಧಾರ ಚಳುವಳಿಯ ಅಂಗವಾಗಿ ಗಾಂಧೀಜಿಯವರು ಕೈಗೊಂಡ ಅಖಿಲ ಭಾರತ ಪ್ರವಾಸದ ಸಂದರ್ಭದಲ್ಲಿ ವಿಜಯಪುರಕ್ಕೆ ಬಂದಾಗ ನಾಗಠಾಣ ಗ್ರಾಮದಿಂದ ನೂರಾರು ಜನ ವಿಜಯಪುರಕ್ಕೆ ಹೋಗಿ ಭಾಗಗವಹಿಸಿ ಮಹಾತ್ಮರ ಭಾಷಣವನ್ನು ಕೇಳಿ ಅವರನ್ನು ಬೇಟಿಯಾಗಿದ್ದರು.

**ತೇರದಾಳ ಜನತೆಯ ಮೇಲೆ ಗಾಂಧೀಜಿಯವರ ಪ್ರಭಾವ**

ತೇರದಾಳ ಗ್ರಾಮಕ್ಕೆ ಹೊಂದಿಕೊಂಡು ಎರಡು ಕೆರೆಗಳಿವೆ. ಒಂದು ಸವರ್ಣೀಯರಿಗಾಗಿ ಇನ್ನೊಂದು ದಲಿತರಿಗಾಗಿ. ದಲಿತರು ನೀರು ತರುತ್ತಿದ್ದ ಕೆರೆಯಲ್ಲಿ ಸವರ್ಣೀಯರು ತಮ್ಮ ದನಗಳ ಮೈ

---

[2] ಅದೇ. ಪು.ಸಂ. 1186.

[3] ಅದೇ. ಪು.ಸಂ. 1201.

[4] ಅದೇ. ಪು.ಸಂ. 1201.

ತೊಳೆಯುವುದು ಮತ್ತು ಬಟ್ಟೆ ತೊಳೆಯುವುದನ್ನು ಮಾಡುತ್ತಿದ್ದರು. ಬೇಸಿಗೆಯಲ್ಲಿ ದನಗಳ ಹಿಂಡು ಆ ಕೆರೆಯಲ್ಲಿಯೇ ಹೊರಳಾಡುತ್ತ ಸೆಗಣಿ ಮತ್ತು ಮೂತ್ರ ವಿಸರ್ಜನೆ ಮಾಡುತ್ತಿದ್ದವು. ನಿಜ ಹೇಳಬೇಕೆಂದರೆ, ಆ ಕೆರೆಯ ನೀರು ಕುಡಿಯಲಿಕ್ಕೆ ಯೋಗ್ಯವಾಗಿರಲಿಲ್ಲ. ಆದಾಗ್ಯೂ ತಲತಲಾಂತರದಿಂದ ದಲಿತರು ಅದೇ ಕೆರೆಯ ನೀರನ್ನು ಬಳಸುತ್ತಿದ್ದರು. ಕಾಲೇಜು ಶಿಕ್ಷಣ ಪಡೆದ ದಲಿತ ಯುವಕರು[5] ಒಂದು ದಿನ ಎಲ್ಲರೂ ಸೇರಿ ಸವರ್ಣೀಯರು ಬಳಸುತ್ತಿದ್ದ ಕೆರೆಯನ್ನು ಮುಟ್ಟಿ ನೀರು ತೆಗೆದುಕೊಂಡರು. ಈ ವಿಷಯ ಕಾಳ್ಗಿಚ್ಚಿನಂತೆ ಊರ ತುಂಬ ಅಷ್ಟೇ ಅಲ್ಲದೆ ಸುತ್ತ ಮುತ್ತಲಿನ ಗ್ರಾಮಗಳಿಗೂ ಹರಡಿತು. ಊರ ಮುಖಂಡರು ಸೇರಿ ದಲಿತರ ಮೇಲೆ ಸಾರ್ವಜನಿಕ ಬಹಿಷ್ಕಾರ ಹಾಕಿದರು. ಇದರಿಂದ ಉದ್ರಿಕ್ತರಾದ ಸುಶಿಕ್ಷಿತ ದಲಿತ ಅಥವಾ ಕೆಳವರ್ಗದ ವಿದ್ಯಾರ್ಥಿಗಳು ಬಿ. ಬಸವಲಿಂಗಪ್ಪನವರಿಗೆ ಟೆಲಿಗ್ರಾಂ ಮುಖಾಂತರ ಸವರ್ಣೀಯರ ದೌರ್ಜನ್ಯಗಳ ಕುರಿತು ಸರ್ಕಾರಕ್ಕೆ ಅರುಹಿದರು.

**ಜಕ್ಕಲಿಯಲ್ಲಿ ಹರಿಜನ ನಿಧಿ ಸಂಗ್ರಹ**

1934ರಲ್ಲಿನ ಅಖಿಲ ಭಾರತ ಪ್ರವಾಸದ ಸಂದರ್ಭದಲ್ಲಿ ಜಕ್ಕಲಿ ಗ್ರಾಮದ ಅಂದಾನಪ್ಪ ದೊಡ್ಡಮೇಟಿಯವರು ಗಾಂಧೀಜಿಯವರನ್ನು ಸ್ವಗ್ರಾಮಕ್ಕೆ ಕರೆತರುವರೆಂಬ ಸುದ್ದಿ ಕೇಳಿ ಸುತ್ತಮುತ್ತಲಿನ ಗ್ರಾಮಗಳಿಂದ 10–20 ಸಾವಿರ ಜನರು ನೆರೆದಿದ್ದರು. ಇದೇ ಸಂದರ್ಭದಲ್ಲಿ "ಹರಿಜನ ನಿಧಿ"ಯನ್ನು ಸಂಗ್ರಹ ಮಾಡಿದರು.[6] ಈ ನಿಧಿಗೆ ಅಂದಾನಪ್ಪ ದೊಡ್ಡಮೇಟಿಯವರು ತಮ್ಮ ತಾಯಿಯವರ ಆಭರಣಗಳನ್ನು ದಾನವಾಗಿ ನೀಡಿದರು. ಹಾಗೂ ಸೇರಿದ 10–20 ಸಾವಿರ ಜನರಲ್ಲಿ ಹೆಚ್ಚಿನ ಸಂಖ್ಯೆಯ ಜನರನ್ನು ಕಾಂಗ್ರೇಸ್‌ನ ಸದಸ್ಯರನ್ನಾಗಿಸಿ ಚಳುವಳಿಗಳಲ್ಲಿ ಭಾಗವಹಿಸುವಂತೆ ಮಾಡಿದರು.

**ಇಂಚಗೇರಿ ಮಠದ ಮಹಾದೇವಪ್ಪನವರ ಮೇಲೆ ಗಾಂಧೀಜೀ ಪ್ರಭಾವ**

ಇಂಚಗೇರಿ ಇಂಡಿ ತಾಲೂಕಿನ ಮಹಾರಾಷ್ಟ್ರದ ಗಡಿಯಲ್ಲಿರುವ ಕರ್ನಾಟಕದ ಕೊನೆಯ ಗ್ರಾಮವಾಗಿದೆ. ಇಂಚಗೇರಿ ಮಠವು ಗುರುಲಿಂಗ ಜಂಗಮ ಮಹಾರಾಜರು, ಬಾವು ಸಾಹೇಬ್ ಮಹಾರಾಜರು, ಗಿರಿಮಲ್ಲಪ್ಪ ಮಹಾರಾಜರಂತಹ ಯತಿಗಳು ವಾಸವಿದ್ದುದರ ಫಲವಾಗಿ ಪ್ರಸಿದ್ಧಿ ಪಡೆದಿದೆ. ಇಂಚಗೇರಿ ಪರಂಪರೆಯಲ್ಲಿ ನವನಾಥ ಸಂಪ್ರದಾಯದ ಶ್ರೀ ಕಾಡಸಿದ್ಧೇಶ್ವರನಾಥರು ಕೊನೆಯವರಾಗಿದ್ದಾರೆ. ಗುರುಲಿಂಗ ಜಂಗಮ ಮಹಾರಾಜರು ಈ ಸಂಪ್ರದಾಯದ ಮೊದಲ ಯತಿಗಳಾಗಿದ್ದರು. 'ಮಹಾದೇವಪ್ಪನವರು ಜಾತ್ಯತೀತರಾಗಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವುದು'[7] ಹಾಗೂ ಆರ್ಥಿಕ ಸಮಾನತೆಯ ಸ್ವಾತಂತ್ರ್ಯಕ್ಕಾಗಿ ಭೂದಾನ ಚಳುವಳಿಯನ್ನು ಕೂಡ ಕೈಗೊಂಡಿದ್ದರು.

**ಗಾಂಧೀಜಿಯವರ ಅನುಯಾಯಿ ಶಿವಲಿಂಗಪ್ಪ ಗುಣಕಿ**

1944ರ ಚಲೇಜಾವ್ ಚಳುವಳಿಯಲ್ಲಿ ಭೂಗತರಾಗಿ ಕಾರ್ಯಚರಣೆಗಳನ್ನು ಕೈಗೊಂಡು ಬಂಧನದ ನಂತರ ಜೈಲಿನಿಂದ ಬಿಡುಗಡೆಯಾಗಿ ಪುನಃ ಭೂಗತರಾಗಿ ಎರಡು ವರ್ಷಗಳ ಕಾಲ ಪಾಂಡಿಚೇರಿ(ಪುದುಚೆರಿ)ಯಲ್ಲಿನ ಅರವಿಂದರ ಆಶ್ರಮದಲ್ಲಿ ಕಳೆದರು. ನಂತರ ಕಾಕಾ ಕಾರಖಾನೀಸ್

---

[5] ಕಲ್ಲೋಳಿಕರ ಎಸ್.ಕೆ. ಮತ್ತು ಹಿಮ್ಮಡಿ ವೈ.ಬಿ. (2002). *ಸ್ವಾಭಿಮಾನಿ ಶಿಲ್ಪಿ ಬಿ. ಬಸವಲಿಂಗಪ್ಪನವರ ಸ್ಮರಣ ಸಂಚಿಕೆ.* ಪು.ಸಂ

[6] ಪೂರ್ವೋಕ್ತ–1, ಪು.ಸಂ. 1250.

[7] ಮಂಗಿ ಮಹಾಲಿಂಗ. (2015). *ಮಾದವ ಜೀವನ ದರ್ಶನ.* ಪು.ಸಂ.141.

ಮತ್ತು ಆರ್. ಆರ್. ದಿವಾಕರ್ ಅವರ ಜೊತೆ ಸೇರಿ ಸ್ವಗ್ರಾಮದಲ್ಲಿ ಸ್ವಚ್ಛತೆ ಕಾಪಾಡುವುದು, ಅಸ್ಪೃಶ್ಯತೆಯ ಆಚರಣೆ ಮತ್ತು ಶೋಷಣೆಗಳ ವಿರುದ್ಧ ಶ್ರಮಿಸಿದರು.[8] 1944–45ರಲ್ಲಿ ವಿಜಯಪುರಕ್ಕೆ ಕಾಲರಾ ಹಾಗೂ ಪ್ಲೇಗ್ ರೋಗಗಳು ಕಾಲಿಟ್ಟು ಹಳ್ಳಿಗಳಿಗೂ ಹರಡಿತ್ತು. ಅಥರ್ಗಾದ ಶ್ರೀ ಮರುಳಾರಾಧ್ಯ ಶಾಸ್ತ್ರಿಗಳು ಆಸ್ಪತ್ರೆಯಲ್ಲಿನ ರೋಗಿಗಳ ಸೇವೆ ಮಾಡುವ ಮೂಲಕ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡರು. ಅಲ್ಲದೇ ಲಂಬಾಣಿ ತಾಂಡಾದಲ್ಲಿ ಕನ್ನಡ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ, ಪ್ರತಿಯೊಬ್ಬ ವಿದ್ಯಾರ್ಥಿಯು ಶಾಲೆಯ ದಾಖಲಾತಿ ಶುಲ್ಕವಾಗಿ ವಾರ್ಷಿಕವಾಗಿ ಒಂದು ಸೊಲ್ಲಿಗೆ (ಶೇರು) ಜೋಳ ನೀಡಬೇಕೆಂದು ನಿರ್ಧರಿಸಿದರು.

**ಕುಮಾರ ಕಕ್ಕಯ್ಯ ಪೋಳ**

ಇವರು ಸಿಂದಗಿ ತಾಲೂಕಿನ ಚಾಂದಕವಠೆಯವರು. ಕಾಂಗ್ರೆಸ್ಸಿನ ನಾಯಕರು 1934ರ ಅಸ್ಪೃಶ್ಯತೆ ನಿವಾರಣೆಯ ಕಾರ್ಯಕ್ರಮದ ಅಂಗವಾಗಿ ಚಾಂದಕವಠೆಗೆ ಬಂದು ಭಾಷಣ ಮಾಡಿ ಬಸವಣ್ಣನ ಗುಡಿಯ ಎದುರಿಗಿನ ಬಾವಿಯಿಂದ ನೀರು ಸೇದಬೇಕು ಎಂದು ಹೇಳಿದರು ಆದರೆ ಅಲ್ಲಿ ಯಾರೊಬ್ಬರು ಅಸ್ಪೃಶ್ಯರು ಇರಲಿಲ್ಲ. ಪೊಲೀಸ ಅಧಿಕಾರಿಯು ಗುಡಿಸಲು ಮುಂದೆ ಕುಳಿತಿದ್ದ ತುಳಜಾರಾಮನ ಮಗ ಶಂಕರನನ್ನು ಒತ್ತಾಯಪೂರ್ವಕವಾಗಿ ಕರೆತಂದು ನೀರು ಮುಟ್ಟಿಸಿ ಅಂದಿನಿಂದ ಈ ಬಾವಿಯು ಸಾರ್ವಜನಿಕವೆಂದು ಹೇಳಿ ಫೋಟೋ ತೆಗೆಸಿಕೊಂಡು ಹೋದರು. ಇದರಿಂದ ಸವರ್ಣಿಯರೆಲ್ಲ ಸೇರಿಕೊಂಡು ಶಂಕರನನ್ನು ಕಟ್ಟಿಹಾಕಿ ಹೊಡೆದರು. ಅಲ್ಲದೇ 15/– ರೂಪಾಯಿಗಳ ದಂಡ ವಿಧಿಸಿದರು.[9] ಈ ಘಟನೆಯು ಕಕ್ಕಯ್ಯ ಪೋಳರ ಮೇಲೆ ಪ್ರಭಾವ ಬೀರಿತ್ತು. ಪುಣಾ ಒಪ್ಪಂದದ ಪ್ರಮುಖ ಅಂಶಗಳಲ್ಲಿ ಒಂದಾದ ಪ್ರತ್ಯೇಕ ಮತಕ್ಷೇತ್ರ ಮತ್ತು ಪ್ರತ್ಯೇಕ ಮತದಾನದ ಹಕ್ಕು ಅಸ್ಪೃಶ್ಯರಿಗೆ ಅನಿವಾರ್ಯವಾಗಿದೆ ಎಂದು ಪ್ರತಿಪಾಧಿಸುತ್ತಾರೆ. 'ಅವರಿಗೆ ಹೇಗೆ ಸ್ವಾತಂತ್ರ್ಯ ಜನ್ಮಸಿದ್ಧ ಹಕ್ಕೊ, ಹಾಗೆಯೇ ಧಾರ್ಮಿಕ ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು, ಅವರಂತೆ ನಾವು ಮನುಷ್ಯರೇ ಆಗಿದ್ದೇವೆ'[10] ನಮಗೂ ಅವರಂತೆ ಬದುಕುವ ಹಕ್ಕಿದೆ ಎಂದು ಘೋಷಿಸಿದರು. ಕಕ್ಕಯ್ಯ ಪೋಳರ ಮಾತುಗಳು ಹಾಗೂ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಸ್ವಾತಂತ್ರ್ಯದ ಮನೋಭಾವದ ಮೂಲಕ ಸಾಮಾಜಿಕ ಪರಿವರ್ತನೆಗೆ ತಮ್ಮನ್ನು ತಾವು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದರು ಎಂದು ಶಂಕರ ಮಗರ ಅವರು ತಮ್ಮ ಮಹಾಪ್ರಬಂಧದಲ್ಲಿ ದಾಖಲಿಸಿದ್ದಾರೆ.

**ಕಾಕಾ ಕಾರಖಾನೀಸ**

ದೇಶಭಕ್ತರು ಬ್ರಹ್ಮಚಾರಿಗಳು ಆಗಿದ್ದ ಕಾಕಾ ಕಾರಖಾನೀಸರು ರಾಮದಾಸರ ತತ್ವಗಳಿಂದ ಪ್ರಭಾವಿತರಾಗಿದ್ದರು. ಇವರು ಸಾತಾರದಲ್ಲಿ ಶಿಕ್ಷಣ ಪೂರೈಸಿಕೊಂಡು ವಿಜಯಪುರಕ್ಕೆ ಆಗಮಿಸಿ ನೆಲೆ ನಿಂತು ದಲಿತೋದ್ಧಾರ ಕಾರ್ಯವನ್ನು ಹಾಗೂ ಖಾದಿ ದಿಕ್ಷೆಯನ್ನು ತಮ್ಮ ಜೀವನದ ಧ್ಯೇಯವಾಗಿಸಿಕೊಂಡು ಶ್ರದ್ಧೆಯಿಂದ ಆತ್ಮೋದ್ಧಾರ (ಮೋಕ್ಷ) ಮಾರ್ಗದಲ್ಲಿ ಸಮಾಜ ಸೇವೆ ಮಾಡಿದವರು'.[11] ಅಲ್ಲದೇ 1934ರಲ್ಲಿ ಗಾಂಧಿಜಿಯವರು ವಿಜಯಪುರಕ್ಕೆ ಅಸ್ಪೃಶ್ಯತೆಯ ನಿವಾರಣೆಯ

---

[8] ಕಾಮತ್ ಸೂರ್ಯನಾಥ್ (ಸಂ.). (2017). *ಸ್ವಾತಂತ್ರ್ಯ ಹೋರಾಟಗಾರ ಅಥರಗಾ ಗ್ರಾಮದ ಶಿವಲಿಂಗಪ್ಪ ಗುಣಕಿ.* ಇತಿಹಾಸ ದರ್ಶನ ಸಂಪುಟ 32, ಪು.ಸಂ. 492–495.

[9] ಶಂಕರ ಮಗರ,. (2018). *ಮುಂಬೈ ಕರ್ನಾಟಕದ ಜೊತೆಗೆ ಡಾ. ಬಾಬಾಸಾಹೇಬ ಅಂಬೇಡ್ಕರ ರವರ ಸಂಬಂಧಗಳು* (ಸಂಶೋಧನ ಮಹಾಪ್ರಬಂಧ). ಪು.ಸಂ.185.

[10] ಅದೇ ಪುಟ ಸಂಖ್ಯೆ 185.

[11] ಪೂರ್ವೋಕ್ತ–1, ಪು.ಸಂ. 1180–1181

ಕಾರ್ಯಕ್ರಮದ ನಿಮಿತ್ತ ಭೇಟಿ ನೀಡಿದ್ದರು. ಆಗ ವಿಜಯಪುರದಲ್ಲಿ ಕಾರಖಾನೀಸರು ಹರಿಜನ ಬಾಲಕ–ಬಾಲಿಕೆಯರ ಎರಡು ಬೋರ್ಡಿಂಗ್‌ಗಳನ್ನು ಪ್ರಾರಂಭಿಸಿದರು. ಇವರ ಸಮಾಜ ಸೇವೆಯನ್ನು ಪರಿಗಣಿಸಿದ ಕೇಂದ್ರ ಸರ್ಕಾರವು "ಪದ್ಮಶ್ರೀ ಪ್ರಶಸ್ತಿ" ನೀಡಿ ಗೌರವಿಸಿತು. ಕಾರಖಾನೀಸರು ಸಾತಾರದಲ್ಲಿ ಇದ್ದಾಗಿನಿಂದಲೂ ಗಾಂಧೀಜಿಯವರ ಕಾರ್ಯ ಚಟುವಟಿಕೆಗಳಿಗೆ ಪ್ರಭಾವಿತರಾಗಿದ್ದರು.

ರಾಷ್ಟ್ರೀಯ ಚಳುವಳಿಗಳ ನಾಯಕತ್ವವನ್ನು ಗಾಂಧೀಜಿಯವರು ವಹಿಸಿಕೊಂಡ ನಂತರದಿಂದ ಸ್ವಾತಂತ್ರ್ಯ ಹೋರಾಟದಲ್ಲಿನ ಬದಲಾವಣೆಗಳಿಂದ ಪ್ರೇರಿತರಾದ ಕಾರಖಾನೀಸರು ಮಹಾತ್ಮರ ಪ್ರಭಾವದಿಂದ ರಾಷ್ಟ್ರೀಯ ಹೋರಾಟಗಳ ಜೊತೆಜೊತೆಗೆ ಸಮಾಜದಲ್ಲಿನ ಅನಿಷ್ಠ ಆಚರಣೆಗಳಾದ ಅಸ್ಪೃಶ್ಯತೆ, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳ ವಿರುದ್ಧ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ.

ಗಾಂಧೀಜಿಯವರ ಬದಲಾದ 1932ರ ತತ್ವ ಸಿದ್ಧಾಂತಗಳ ಪ್ರಭಾವದಿಂದ ವಿಜಯಪುರ ಜಿಲ್ಲೆಯ ನಗರ ಮತ್ತು ಗ್ರಾಮೀಣ ಜನತೆ ಒಕ್ಕೊರಲಿನಿಂದ ಅಸ್ಪೃಶ್ಯತೆ ನಿವಾರಣೆಗಾಗಿ ಶ್ರಮಿಸಿದರು. ಇವರಲ್ಲಿ ಶ್ರೀನಿವಾಸರಾಯರು (ಸೀನಪ್ಪ) ಆಮರಣ ಸಮಾಜ ಸೇವೆಯ ಪ್ರತಿಜ್ಞೆ ಮಾಡಿದ್ದರು.[12] ಇವರ ಪ್ರಕಾರ ಸಮಾಜ ಸೇವೆ ಎಂದರೆ, ಯಾವ ಕೆಲಸವೂ ಕೀಳಲ್ಲ, ಭೋಜನ ಸಮಾರಂಭಗಳಲ್ಲಿ ಊಟ ನೀಡುವುದು, ಎಂಜಲು ಎತ್ತುವುದು, ಶವ ಸಂಸ್ಕಾರ ಯಾವುದಕ್ಕೂ ಮುಜುಗರ ಇಲ್ಲದೇ ನಿಷ್ಕಲ್ಮಶ ಮನಸ್ಸಿನಿಂದ ನಿರ್ವಹಿಸುವ ಕರ್ಮವಾಗಿದೆ. ಬಾಗೇವಾಡಿಯ ಯಮನಪ್ಪ ಅವಟಿಯವರು[13] 1940ರಲ್ಲಿ ಎಲ್ಲಾ ಸಂಗಡಿಗ ಸತ್ಯಾಗ್ರಹಿಗಳನ್ನು ತಮ್ಮ ಸ್ವಗ್ರಹಕ್ಕೆ ಭೋಜನ ಕೂಟಕ್ಕೆ ಆಮಂತ್ರಿಸಿದ್ದರು. ಈ ಆಮಂತ್ರಣದಲ್ಲಿ ಯಾವುದೇ ಜಾತಿ ಬೇಧವಿರಲಿಲ್ಲ. ಹೀಗಾಗಿ ಇವರು ಗ್ರಾಮದಲ್ಲಿನ ಸ್ವಜಾತಿ ಮತ್ತು ಬಂಧುಗಳಿಂದ ಧಿಕ್ಕಾರ ಹಾಗೂ ದೂಷಣೆಗಳಿಗೆ ಗುರಿಯಾದರು. ಗಾಂಧೀಜಿಯವರ ಅಸ್ಪೃಶ್ಯತೆಯ ನಿವಾರಣಾ ಚಳುವಳಿಯ ಭಾಗವಾಗಿ ಹುನಗುಂದ ತಾಲೂಕಿನ ಹುಚ್ಚಪ್ಪ ಬಸಪ್ಪ ಲೆಕ್ಕದ[14] ಗಾಂಧೀಜಿಯವರ ತತ್ವ ಸಿದ್ಧಾಂತಗಳಾದ ಅಸ್ಪೃಶ್ಯತೆ ಆಚರಣೆ ಮಾಡದಿರುವುದು, ಖಾದಿ ಉತ್ಪಾದಿಸುವುದು ಮತ್ತು ಧರಿಸುವುದು, ಅಹಿಂಸಾ ತತ್ವಗಳ ಪಾಲನೆ ಮತ್ತು ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದರು. ಗಣಪ್ಪ ಬಸಪ್ಪ ಬಂಡರಗಲ್ಲ[15] ಇವರು ಜಕ್ಕಲಿ ಗ್ರಾಮಸ್ಥರಾದ ಅಂದಾನಪ್ಪ ದೊಡ್ಡಮೇಟಿಯವರು ಗಾಂಧೀಜಿಯವರನ್ನು ಸ್ವಗ್ರಾಮಕ್ಕೆ ಕರೆತರುತ್ತಿರುವ ಸುದ್ದಿ ತಿಳಿದು ಸುತ್ತಮುತ್ತಲಿನ ಗ್ರಾಮಗಳಿಗೆ ಹೋಗಿ ಹರಿಜನೋದ್ಧಾರ ಚಳುವಳಿಯ ಕುರಿತು ಪ್ರಚಾರ ಮಾಡಿದ್ದಲ್ಲದೇ ಸಾಮಾನ್ಯ ಜನರು ಈ ಸಮಾವೇಶದಲ್ಲಿ ಹಾಜರಾಗುವಂತೆ ಮಾಡಿದ ಪ್ರಮುಖರಾಗಿದ್ದಾರೆ.

**ಸಮಾರೋಪ**

ಭಾರತದಲ್ಲಿ ಸಾಮಾಜಿಕ ಪರಿವರ್ತನೆ ಹಾಗೂ ದಲಿತೋದ್ಧಾರ ಚಳುವಳಿ ಮಾಡಿದವರೆಂದರೆ, ಬಾಬಾಸಾಹೇಬ ಡಾ. ಬಿ. ಆರ್. ಅಂಬೇಡ್ಕರ್‌ರವರು ಮತ್ತು ಮಹಾತ್ಮ ಗಾಂಧೀಜಿಯವರು. ಈ ಇಬ್ಬರು ಮಹಾನ್ ನಾಯಕರ ಪ್ರಭಾವದಿಂದ ದೇಶಾದ್ಯಂತ ಸಾಮಾಜಿಕ ಸಮಾನತೆ ಹಾಗೂ ಆರ್ಥಿಕ

---

[12] ಅದೇ. ಪು.ಸಂ. 1189.

[13] ಅದೇ. ಪು.ಸಂ. 1225.

[14] ಅದೇ ಪುಟ ಸಂಖ್ಯೆ. 1246.

[15] ಅದೇ ಪುಟ ಸಂಖ್ಯೆ. 1249.

ಸ್ವಾತಂತ್ರ್ಯಕ್ಕಾಗಿ ಅಖಿಲ ಭಾರತ ಮಟ್ಟದಲ್ಲಿ ಚಳುವಳಿಗಳು ಜರುಗಿರುವುದನ್ನು ಕಾಣಬಹುದಾಗಿದ್ದು, ಇದಕ್ಕೆ ವಿಜಯಪುರ ಜಿಲ್ಲೆಯು ಹೊರತಾಗಿರಲಿಲ್ಲ. ಬಾಬಾಸಾಹೇಬರು ಸ್ವತಃ ಸಾಮಾಜಿಕ ಪೀಡನೆ, ದೌರ್ಜನ್ಯಗಳನ್ನು ಅನುಭವಿಸಿ ಅಂತ್ಯಜರೆಂದೇ ಕರೆಯಲ್ಪಟ್ಟ ಕೆಳವರ್ಗದ ಎಲ್ಲಾ ಸಮುದಾಯಗಳ ಸ್ವಾಭಿಮಾನ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರು. ಆದ ಕಾರಣ ಬಾಬಾಸಾಹೇಬರಿಗೆ ಭಾರತೀಯ ಸಮಾಜ ಮತ್ತು ಹಿಂದೂ ಧರ್ಮದಲ್ಲಿನ ಅನಿಷ್ಠ ಆಚರಣೆಗಳ ಪರಿಪೂರ್ಣ ಜ್ಞಾನ ಹೊಂದಿದ್ದರು. ಹೀಗಾಗಿ ಡಾ. ಬಿ. ಆರ್. ಅಂಬೇಡ್ಕರ್ ಅವರ ನೇತೃತ್ವದ ಹೋರಾಟವು ಶಾಸನಬದ್ಧವಾಗಿ ಹಾಗೂ ಮೂಲಭೂತವಾಗಿ ಕೆಳವರ್ಗದ ಜನರಿಗೆ ದೊರೆಯಬೇಕಾದ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಗಳಿಗಾಗಿ ಹೋರಾಡಿ ಯಶಸ್ವಿಯಾದರು. ಆದರೆ ಗಾಂಧೀಜಿಯವರು ಭಾರತೀಯ ಸಮಾಜದಲ್ಲಿನ ಜಾತಿ ವ್ಯವಸ್ಥೆ ಹಾಗೂ ವರ್ಣ ವ್ಯವಸ್ಥೆಗಳ ಕುರಿತು ಗೊಂದಲದಲ್ಲಿದ್ದರು. ಆದರೂ ಕೂಡ ಇವರು ಸ್ವಾತಂತ್ರ್ಯ ಚಳುವಳಿಗಳ ಮೂಲಕ ಭಾರತೀಯ ಸಮಾಜದಲ್ಲಿನ ಮೌಢ್ಯ, ಅಸಮಾನತೆ, ಅನಿಷ್ಠ ಆಚರಣೆಗಳನ್ನು ಕಿತ್ತು ಹಾಕಲು ಪ್ರಯತ್ನ ಮಾಡಿದರು.

20ನೇ ಶತಮಾನದಲ್ಲಿ ಭಾರತೀಯ ಸಮಾಜ ಪರಿವರ್ತನೆಗಾಗಿ ಕಾರ್ಯಪ್ರವೃತ್ತರಾದ ಇಬ್ಬರು ಮಹಾನ್ ವ್ಯಕ್ತಿಗಳೆಂದರೆ, ಮಹಾತ್ಮ ಗಾಂಧೀಜಿ ಮತ್ತು ಬಾಬಾಸಾಹೇಬ ಡಾ. ಬಿ.ಆರ್. ಅಂಬೇಡ್ಕರ ರವರು. 1932ರ ಪೂನಾ ಒಪ್ಪಂದದ ನಂತರ ಗಾಂಧೀಜಿಯವರು ಸ್ವತಃ ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಆಚರಣೆ ವಿರುದ್ಧ, ಆರ್ಥಿಕ ಸಮಾನ ಸ್ಥಾನಮಾನಗಳಿಗಾಗಿ ಚಳುವಳಿಗಳನ್ನು ಹಮ್ಮಿಕೊಂಡರು. ಕಾಂಗ್ರೆಸ್ ನೇತೃತ್ವದ 1932ರ ನಂತರದ ದಲಿತೋದ್ಧಾರ ಕಾರ್ಯಕ್ರಮಗಳು ಆ ಸಮಯಕ್ಕೆ ಮಾತ್ರ ಸೀಮಿತವಾದ ಬದಲಾವಣೆಗಳನ್ನು ನೀಡಿದ್ದು, ಕಾಲಾಂತರದಲ್ಲಿ ಅದು ಕೆಳವರ್ಗದ ಅಥವಾ ಅಸ್ಪೃಶ್ಯ ಜನಾಂಗದ ಮೇಲೆ ಅದೇ ಮೊದಲಿನ ಪರಿಣಾಮಗಳನ್ನೇ ಬೀರಿತು. ಕಾರಣ ಸ್ವತಃ ಗಾಂಧೀಜಿಯವರೇ ಭಾರತೀಯ ಸಾಮಾಜಿಕ ವ್ಯವಸ್ಥೆಯ ಕುರಿತು ಗೊಂದಲದ ಮನಃಸ್ಥಿತಿಯನ್ನು ಹೊಂದಿದ್ದರು. ಇವರು ತಮ್ಮ ಭಾಷಣಗಳಲ್ಲಿ ಹೇಳಿರುವಂತೆ, "ಜಾತಿ ವ್ಯವಸ್ಥೆಯು ಒಂದು ಅಡಚಣೆಯಾಗಿದೆ, ಆದರೆ ಪಾಪವಲ್ಲ. ಆದರೆ, ಅಸ್ಪೃಶ್ಯತೆ ಆಚರಣೆಯು ಪಾಪ ಮತ್ತು ದೊಡ್ಡ ಅಪರಾಧವಾಗಿದೆ. ಸಮಯವಿರುವಾಗಲೇ ಈ ಸರ್ಪವನ್ನು ನಾಶ ಮಾಡದಿದ್ದರೇ, ಹಿಂದೂ ಧರ್ಮವನ್ನು ತಿಂದು ಹಾಕುತ್ತದೆ" ಎಂದಿದ್ದಾರೆ. ಜಾತಿ ತಾಯಿಯಾದರೆ ಅಸ್ಪೃಶ್ಯತೆಯು ಅದರ ಕೂಸಾಗಿದೆ. ಹೀಗಿರುವಾಗ ಜಾತಿ ಮತ್ತು ಅಸ್ಪೃಶ್ಯತೆಗಳ ಸಮರ್ಥನೆ ಸಮಂಜಸವಲ್ಲ.

ಗಾಂಧೀಜಿಯವರ ಪ್ರಕಾರ ಅಸ್ಪೃಶ್ಯತೆಯನ್ನು ಕಿತ್ತುಹಾಕುವುದು ಭಾರತದ ಲಕ್ಷಾಂತರ ಹಿಂದೂಗಳ ಮನಸ್ಸಿನ ಬದಲಾವಣೆಯನ್ನು ಅವಲಂಬಿಸಿದೆ ಎಂದು ಬಲವಾಗಿ ನಂಬಿದ್ದರು. ಹೀಗಾಗಿ ಹಿಂದೂ ಸಮಾಜವನ್ನು ಅದರಲ್ಲಿದ್ದ ಅನಿಷ್ಠ ಆಚರಣೆ ಮತ್ತು ಅಸ್ಪೃಶ್ಯತೆಗೆ ಒಳಗಾದ ವರ್ಗಗಳನ್ನು ಮುಕ್ತಗೊಳಿಸಲು ದೀರ್ಘವಾಗಿ ಯೋಚಿಸಿದ್ದರು. ಹಾಗೂ 1932ರ ಪೂಣಾ ಒಪ್ಪಂದದ ನಂತರ ತಮ್ಮ ಯೋಚನೆಗಳಿಗೆ ಪೂರಕವಾಗಿ ಕಾರ್ಯಪ್ರವೃತ್ತರಾದರು.

ಅಸ್ಪೃಶ್ಯತೆ ನಿವಾರಣಾ ಚಳುವಳಿಯ ಯಶಸ್ಸು ಹಾಗೂ ಪರಿಣಾಮವು ಮಿಶ್ರವಾಗಿದ್ದರೂ ಕೂಡ ಕ್ರಿ. ಪೂ. 5ನೇ ಶತಮಾನಕ್ಕೆ ಬುದ್ಧ, 12ನೇ ಶತಮಾನಕ್ಕೆ ಬಸವಣ್ಣ ಮತ್ತು 20ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿಯವರು ಹಾಗೂ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ ಅವರು ಸಮಾಜ ಪರಿವರ್ತನೆಗಾಗಿ ಮಾಡಿದ ತ್ಯಾಗ ಅವಿಸ್ಮರಣೀಯವಾಗಿವೆ.

**ಪರಾಮರ್ಶನ ಗ್ರಂಥಗಳು**


- ಜಮಾದಾರ ಬಸವರಾಜ. (2018). *ಸಿಂದಗಿ ಪ್ರದೇಶದ ಇತಿಹಾಸ ಮತ್ತು ಪುರಾತತ್ವ.* ಪಿಎಚ್.ಡಿ ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ.
- ಕಲ್ಲೋಳಿಕರ ಎಸ್.ಕೆ. ಮತ್ತು ಹಿಮ್ಮಡಿ ವೈ.ಬಿ. (2002). *ಸ್ವಾಭಿಮಾನಿ ಶಿಲ್ಪಿ ಬಸವಲಿಂಗಪ್ಪನವರ ಸ್ಮರಣ ಸಂಚಿಕೆ.* ಬಸವಲಿಂಗಪ್ಪನವರ ಮೂರ್ತಿ ಪ್ರತಿಷ್ಠಾಪನಾ ಸಮಿತಿ.
- ಕಾಮತ್ ಸೂರ್ಯನಾಥ (ಸಂ.). (1974). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ ಒಂದು.* ಗೀತಾ ಬುಕ್ ಹೌಸ್.
- ಕಾಮತ್ ಸೂರ್ಯನಾಥ್ (ಸಂ.) (1995). *ಸ್ವಾತಂತ್ರ್ಯ ಹೋರಾಟದಲ್ಲಿ ಇಂಚಗೇರಿ ಪಾತ್ರ.* ಇತಿಹಾಸ ದರ್ಶನ ಸಂಪುಟ 10, ಕರ್ನಾಟಕ ಇತಿಹಾಸ ಅಕಾಡೆಮಿ.
- ಕಾಮತ್ ಸೂರ್ಯನಾಥ್ (ಸಂ.) (2017). *ಸ್ವಾತಂತ್ರ್ಯ ಹೋರಾಟಗಾರ ಅಥರಗಾ ಗ್ರಾಮದ ಶಿವಲಿಂಗಪ್ಪ ಗುಣಕಿ.* ಇತಿಹಾಸ ದರ್ಶನ ಸಂಪುಟ 32, ಕರ್ನಾಟಕ ಇತಿಹಾಸ ಅಕಾಡೆಮಿ.
- ಮಗರ ಶಂಕರ. (2018). *ಮುಂಬೈ ಕರ್ನಾಟಕದ ಜೊತೆಗೆ ಡಾ. ಬಾಬಾಸಾಹೇಬ ಅಂಬೇಡ್ಕರ ರವರ ಸಂಬಂಧಗಳು.* ಪಿಎಚ್.ಡಿ ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ.
- ಮಂಗಿ ಮಹಾಲಿಂಗ. (2015). ***ಮಾದವ ಜೀವನ ದರ್ಶನ.*** ಗಿರೀಶ ಪ್ರಕಾಶನ ಇಂಚಗೇರಿ ಮಠ.
- ಮುನಿಸ್ವಾಮಿ ಆರ್. (ಸಂ.). (1999). *ಭಾರತ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ, ವಿಜಾಪುರ ಜಿಲ್ಲೆ (ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ),* ಅಭಿಮಾನಿ ಪ್ರಕಾಶನ.
- Biswas Sujay. (2021). A Re-reading of Gandhi’s and Ambedkar’s Emancipatory Discourses for Social Action Against Untouchability. *Oxford University Press and Community Development Journal*.
- Biswas, S. (1914). Gandhi’s struggle Against Caste and Untouchability in South Africa, 1893-1914. *South Asian Review*. 42 (1), 3–17.
- Biswas, Suja. (2018). Gandhi’s Approach to Caste and Untouchability: A Reappraisal. *Social Scientist*. 46 (9–10). 71–90.
- Satyan B.N. (1966). *Mysore State Gazetteer, “Bijapur District”* Mysore State Gazetteer, Government of Karnataka
- Umapati K.L. (1992). *Role of the Bijapur District (Karnataka) in the Indian Freedom Struggle.* Unpublished Ph.D thesis, Karnataka University.